# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 168
ಸದಸ್ಯರ ಹೆಸರು : ಶ್ರೀ. ಟಿ.ಎ. ಶರವಣ
ಉತ್ತರಿಸಬೇಕಾದ ದಿನಾಂಕ : 10-07-2018
ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸಕ್ತ ಮುಂಗಾರು ಹಂಗಾಮಿನಿಂದಲೇ ರಾಜ್ಯಾದ್ಯಂತ ರೈತರಿಗೆ ರಸಗೊಬ್ಬರವನ್ನು ಪಿಓಎಸ್(ಪಾಯಿಂಟ್ ಆಫ್ ಸೇಲ್) ಮೂಲಕ ನೀಡಲು ರಾಜ್ಯದಲ್ಲಿನ ಎಷ್ಟು ವ್ಯವಸಾಯ ಸೇವಾ ಸಹಕಾರಿ ಸಂಘಗಳಿಗೆ ಸರ್ಕಾರದಿಂದ ಪಿಓಎಸ್ ಯಂತ್ರಗಳನ್ನು ವಿತರಿಸಲಾಗಿದೆ; | ಪ್ರಸಕ್ತ ಮುಂಗಾರು ಹಂಗಾಮಿನಿಂದಲೇ ರಾಜ್ಯಾದ್ಯಂತ ರೈತರಿಗೆ ರಸಗೊಬ್ಬರವನ್ನು ಪಿ.ಓ.ಎಸ್(ಪಾಯಿಂಟ್ ಆಫ್ ಸೇಲ್) ಮೂಲಕ ನೀಡಲು ರಾಜ್ಯದಲ್ಲಿನ 2377 ವ್ಯವಸಾಯ ಸೇವಾ ಸಹಕಾರಿ ಸಂಘಗಳಿಗೆ ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ರಸಗೊಬ್ಬರ ತಯಾರಕ ಸಂಸ್ಥೆಗಳ ಮುಖಾಂತರ ಪಿ.ಓ.ಎಸ್ ಯಂತ್ರಗಳನ್ನು ವಿತರಿಸಲಾಗಿದೆ. |
| ಆ) | ಗ್ರಾಮಾಂತರ ಪ್ರದೇಶಗಳಲ್ಲಿರುವ ವ್ಯವಸಾಯ ಸೇವಾ ಸಹಕಾರಿ ಸಂಘಗಳಲ್ಲಿ ರೈತರು ಬೆರಳು ಮುದ್ರೆ ನೀಡಲು ಪರಿಣಾಮಕಾರಿ ಇಂಟರ್‌ನೆಟ್ ಸಂಪರ್ಕ ವ್ಯವಸ್ಥೆಗೆ ಏನು ಕ್ರಮ ಅನುಸರಿಸಲಾಗಿದೆ; | ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಉತ್ತಮ ಇಂಟರ್ ನೆಟ್ ಸಂಪರ್ಕ ಇರುವ ಸಂಸ್ಥೆಯ ಸಿಮ್ ಕಾರ್ಡ್‌ನ್ನು ಪಿ.ಓ.ಎಸ್ ಯಂತ್ರದಲ್ಲಿ ಬಳಸುವಂತೆ ವ್ಯವಸಾಯ ಸೇವಾ ಸಹಕಾರಿ ಸಂಘಗಳಿಗೆ ಸಲಹೆ ನೀಡಲಾಗಿದ್ದು ಅದರಂತೆ ವ್ಯವಸಾಯ ಸೇವಾ ಸಹಕಾರಿ ಸಂಘಗಳಲ್ಲಿ ಕ್ರಮ ವಹಿಸಲಾಗಿದೆ. |
| ಇ) | ಪಿಓಎಸ್ (ಪಾಯಿಂಟ್ ಆಫ್ ಸೇಲ್) ಯಂತ್ರದಲ್ಲಿ ರೈತರ ವಿವರ ದಾಖಲಿಸಲು ಮತ್ತು ರೈತರ ಬಯೋಮೆಟ್ರಿಕ್ ನೀಡುವುದು ಸೇರಿದಂತೆ ವ್ಯವಸಾಯ ಸೇವಾ ಸಹಕಾರಿ ಸಂಘಗಳಿಗೆ ಮತ್ತು ರೈತರಿಗೆ ತಿಳುವಳಿಕೆ ನೀಡಲು ಏನು ಕ್ರಮ ವಹಿಸಲಾಗಿದೆ? | ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ ರಸಗೊಬ್ಬರದಲ್ಲಿ ಡಿ.ಬಿ.ಟಿ ಯೋಜನೆಯ ಅನುಷ್ಠಾನ ಸಂಬಂಧ ಕೇಂದ್ರ ಕಛೇರಿಯಲ್ಲಿ ರಸಗೊಬ್ಬರ ತಯಾರಕ ಸಂಸ್ಥೆಯ ಮಾರ್ಕೆಟಿಂಗ್ ಅಧಿಕಾರಿಗಳಿಗೆ ಮತ್ತು ಎಲ್ಲಾ ಜಿಲ್ಲೆಗಳ ಇಲಾಖಾ ತಾಂತ್ರಿಕ ಅಧಿಕಾರಿಗಳಿಗೆ ಪಾಯಿಂಟ್ ಆಫ್ ಸೇಲ್ ಉಪಕರಣದ ಬಳಕೆಯ ಬಗ್ಗೆ ರಾಜ್ಯಮಟ್ಟದ ತರಬೇತಿಯನ್ನು ನೀಡಲಾಗಿದೆ.<br><br>ಪಿ.ಓ.ಎಸ್ ಯಂತ್ರದ ಮೂಲಕ ರಸಗೊಬ್ಬರ ಮಾರಾಟ ಮಾಡುವ ಬಗ್ಗೆ ವ್ಯವಸಾಯ ಸೇವಾ ಸಹಕಾರಿ ಸಂಘಗಳಿಗೆ ಹಾಗೂ ರಸಗೊಬ್ಬರ ಚಿಲ್ಲರೆ ಮಾರಾಟಗಾರರಿಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರತ್ಯೇಕವಾಗಿ ತರಬೇತಿಗಳನ್ನು ಆಯೋಜಿಸಿ ಯಂತ್ರ ಬಳಕೆಯ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆಗಳ ಮೂಲಕ ಮಾಹಿತಿ ನೀಡಲಾಗಿರುತ್ತದೆ.<br><br>ರೈತರ ಮಾಹಿತಿಗಾಗಿ ಪತ್ರಿಕಾ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗಿದೆ. ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ರೈತರ ಸಂವಾದಗಳಲ್ಲಿ ರಸಗೊಬ್ಬರದ ವಹಿವಾಟನ್ನು ಪಿ.ಓ.ಎಸ್ ಯಂತ್ರದ ಮೂಲಕ ಕೈಗೊಳ್ಳುತ್ತಿರುವ ಬಗ್ಗೆ ರೈತರಿಗೆ ಅರಿವು ಮೂಡಿಸಲಾಗಿರುತ್ತದೆ.<br><br>ಭಿತ್ತಿಪತ್ರ, ಕರಪತ್ರಿಕೆ, ದಿನಪತ್ರಿಕೆಗಳು, ರೇಡಿಯೋ ಹಾಗೂ ದೂರದರ್ಶನ ಮುಖಾಂತರ ಸಹ ತಿಳುವಳಿಕೆ ನೀಡಲಾಗಿದೆ. |

ಕೃಇ 53 ಕೃರಾಗೊ 2018

(ಎನ್.ಹೆಚ್.ಶಿವಶಂಕರ ರೆಡ್ಡಿ)
ಕೃಷಿ ಸಚಿವರು